
# ರಿಷಿ ಪ್ರೇಮ ಪ್ರಸಂಗದ ಮೆಲುಕು!

ರಿಷಿ ಕಪೂರ್ ಮತ್ತು ನೀತು ಸಿಂಗ್ ಅವರ ಪ್ರೀತಿ ಮದುವೆಯ ಅರ್ಥ ಪಡೆದು 35 ವರ್ಷಗಳ ಮೇಲಾಗಿದೆ. ವಾಸ್ತವವಾಗಿ ರಿಷಿ ಪ್ರೀತಿಸಿದ್ದು ಇನ್ನೊಬ್ಬ ಹುಡುಗಿಯನ್ನು! ಆ ಗುಟ್ಟನ್ನು ರಿಷಿಯವರೇ ನೆನಪಿಸಿಕೊಂಡಿದ್ದಾರೆ.

‘ನನಗಿನ್ನೂ ನೆನಪಿದೆ. ಅಂದು ನನ್ನ ಗೆಳತಿಯೊಂದಿಗೆ ತೀವ್ರ ಜಗಳವಾಗಿತ್ತು. ಆಗ ನನ್ನ ಹೃದಯವೇ ಒಡೆದು ಹೋದಂತಾಗಿತ್ತು. ಅವಳನ್ನು ಮತ್ತೆ ಒಲಿಸಿಕೊಳ್ಳುವ ಹಟವಿತ್ತು. ಅದಕ್ಕಾಗಿ ಪಡೆದುಕೊಂಡದ್ದು ನೀತು ಸಹಾಯವನ್ನು. ಗೆಳತಿಗೆ ಟೆಲಿಗ್ರಾಮ್‌ಗಳನ್ನು ಬರೆಯಲು ನೀತು ನೆರವಾಗುತ್ತಿದ್ದಳು. ಹೀಗೆ ಕಾಲಚಕ್ರ ಉರುಳಿತು. ಯೂರೋಪ್‌ಗೆ ಚಿತ್ರೀಕರಣಕ್ಕೆಂದು ಹೋದಾಗ ನೀತುಳನ್ನು ಮಿಸ್ ಮಾಡಿಕೊಳ್ಳತೊಡಗಿದೆ. ಆಗಲೇ ನನಗೆ ಅರ್ಥವಾಗತೊಡಗಿದ್ದು, ನೀತು ನನಗಾಗಿ ಇರುವವಳೆಂದು’.

– ಹೀಗೆ ರಿಷಿ ತಮ್ಮ ಗತಕಾಲದ ಪ್ರೇಮಗಾಥೆಯ ರಹಸ್ಯವನ್ನು ಬಿಚ್ಚಿಟ್ಟಿದ್ದು ಅನುಪಮ್ ಖೇರ್ ಅವರ ಟಿವಿ ಕಾರ್ಯಕ್ರಮ ‘ಕುಚ್ ಭಿ ಹೋ ಸಕ್ತಾ ಹೇ’ದಲ್ಲಿ. ಇದರಲ್ಲಿ ರಿಷಿ ಕಪೂರ್ ಮತ್ತು ನೀತು ಸಿಂಗ್ ಜೊತೆಯಾಗಿ ಮಧುರ ನೆನಪುಗಳನ್ನು ಹಂಚಿಕೊಂಡಿದ್ದಾರೆ.

1974ರಲ್ಲಿ ‘ಜೆಹ್ರೀಲಾ ಇನ್ಸಾನ್’ ಚಿತ್ರದ ಚಿತ್ರೀಕರಣದ ವೇಳೆ ರಿಷಿ ಮತ್ತು ಅವರ ಪ್ರೇಯಸಿ ನಡುವೆ ಉಂಟಾದ ಮನಸ್ತಾಪ ಇಬ್ಬರನ್ನೂ ದೂರ ಮಾಡಿತು. ಈ ದುಃಖದಲ್ಲಿದ್ದ ರಿಷಿ ಆಕೆಯನ್ನು ಮರಳಿ ಪಡೆಯಲು ಹರಸಾಹಸ ಪಟ್ಟರು. ಚಿತ್ರದ ನಾಯಕಿಯರಲ್ಲಿ ಒಬ್ಬರಾಗಿದ್ದ ನೀತು ಇಬ್ಬರ ನಡುವೆ ಮರು ಬೆಸುಗೆ ಹಾಕಲು ಟೆಲಿಗ್ರಾಮ್‌ಗಳನ್ನು ಬರೆದರು. ಆದರೆ ಅದರಿಂದ ಪ್ರಯೋಜನವಾಗಲಿಲ್ಲ.



ಚಿತ್ರೀಕರಣಕ್ಕೆಂದು ವಿದೇಶಕ್ಕೆ ಹೋದಾಗ ನೀತು ಗೈರು ರಿಷಿಯನ್ನು ಬಹುವಾಗಿ ಕಾಡಿತ್ತಂತೆ. ಒಮ್ಮೆ ಯೂರೋಪ್‌ನಲ್ಲಿದ್ದಾಗ ಆಕೆಯನ್ನು ಕುರಿತು ಯೋಚಿಸುತ್ತಿರುವುದಾಗಿ ಕಾಶ್ಮೀರದಲ್ಲಿದ್ದ ನೀತುಗೆ ಟೆಲಿಗ್ರಾಮ್ ಕಳುಹಿಸಿದ್ದನ್ನು ರಿಷಿ ನೆನಪಿಸಿಕೊಂಡಿದ್ದಾರೆ. ಹೀಗೆ ರಿಷಿ ಪ್ರೇಮ ನಿವೇದನೆ ಮಾಡಿಕೊಂಡಿದ್ದರೂ ಮದುವೆಯಾಗುವ ಯೋಚನೆ ಅವರಲ್ಲಿ ಇರಲಿಲ್ಲ. ರಿಷಿಗೆ ಹಲವಾರು ಗೆಳತಿಯರಾದರೆ, ನೀತು, ರಿಷಿಯ ಹೊರತು ಮತ್ಯಾರನ್ನೂ ತಮ್ಮ ಲೋಕಕ್ಕೆ ಬಿಟ್ಟುಕೊಟ್ಟಿಲ್ಲವಂತೆ. ಇಬ್ಬರ ಪ್ರೇಮ ಮತ್ತು ದಾಂಪತ್ಯದ ವಿಶೇಷ ಕ್ಷಣಗಳು ಈ ಕಾರ್ಯಕ್ರಮದಲ್ಲಿವೆ.



# ವಾಣಿ ನಿರುದ್ಯೋಗ ಪರ್ವ ಅಂತ್ಯ

ಯಶ್ ರಾಜ್ ನಿರ್ಮಾಣದ ‘ಶುದ್ಧ್ ದೇಸಿ ರೊಮ್ಯಾನ್ಸ್’ ಚಿತ್ರದ ಮೂಲಕ ಬಾಲಿವುಡ್ ಅಂಗಳಕ್ಕೆ ಕಾಲಿರಿಸಿದಾಕೆ ವಾಣಿ ಕಪೂರ್. ಈ ಚಿತ್ರ ಬಿಡುಗಡೆಯಾಗಿದ್ದು 2013ರಲ್ಲಿ. ಸುಶಾಂತ್ ಸಿಂಗ್ ರಜಪೂತ್ ಮತ್ತು ಪರಿಣೀತಿ ಚೋಪ್ರಾ ಸಹ ಈ ಚಿತ್ರದಲ್ಲಿದ್ದರು. ಇದು ವಾಣಿಯ ಕೊನೆಯ ಚಿತ್ರವೂ ಹೌದು. ಈ ಚಿತ್ರ ಬಿಡುಗಡೆಯಾಗಿ ಎರಡು ವರ್ಷ ದಾಟಿದ್ದರೂ ಆಕೆ ಮತ್ತೊಂದು ಬಾಲಿವುಡ್ ಸಿನಿಮಾದಲ್ಲಿ ಕಾಣಿಸಿಕೊಂಡಿಲ್ಲ. ಈ ನಿರದ್ಯೋಗದ ಪರ್ವವನ್ನು ಆಕೆ ಸಂಕಷ್ಟದ ವರ್ಷಗಳೆಂದು ಕರೆದುಕೊಂಡಿದ್ದಾಳೆ. ಸಿನಿಮಾ ಒಂದು ಮಟ್ಟದಲ್ಲಿ ಗೆದ್ದರೂ, ಅಭಿನಯದಲ್ಲಿ ಮೆಚ್ಚುಗೆ ಗಳಿಸಿದರೂ ವಾಣಿಗೆ ಅವಕಾಶಗಳು ಸಿಗಲಿಲ್ಲ. ಸಿನಿಮಾದ ಗೆಲುವು ಅವಕಾಶಗಳನ್ನು ತಾನಾಗಿಯೇ ತನ್ನ ಬಳಿ ಕರೆತರುತ್ತದೆ ಎನ್ನುವುದು ವಾಣಿಯ ನಿರೀಕ್ಷೆಯಾಗಿತ್ತು. ಆದರೆ ಪರಿಸ್ಥಿತಿ ಅದಕ್ಕೆ ತದ್ವಿರುದ್ಧವಾಗಿ ವರ್ತಿಸಿತ್ತು.

ನಿರ್ಮಾಪಕರು ತನ್ನ ಮನೆ ಬಾಗಿಲಿಗೇ ಬರುತ್ತಾರೆ. ಸಿನಿಮಾಗಳ ಸುರಿಮಳೆಯೇ ಸುರಿಯುತ್ತದೆ ಎಂಬ ಆಸೆ ಆಕೆಯಲ್ಲಿತ್ತಂತೆ. ಆದರೆ ಬಾಲಿವುಡ್ ಆಕೆಯತ್ತ ಮತ್ತೆ ತಿರುಗಿ ನೋಡಿರಲಿಲ್ಲ. ಹೀಗಾಗಿ ಖಾಲಿ ಕುಳಿತಿದ್ದ ವಾಣಿ 2014ರಲ್ಲಿ ತಮಿಳಿನ ‘ಆಹಾ ಕಲ್ಯಾಣಂ’ ಎಂಬ ಚಿತ್ರದಲ್ಲಿ ನಟಿಸಿ ಹೋಗಿದ್ದಳು. ಅವಕಾಶಗಳಿಗೆ ಹುಡುಕದೆ, ಕಾದು ಕುಳಿತದ್ದೇ ತನ್ನ ಪಾಲಿಗೆ ಮುಳ್ಳಾಯಿತು ಎಂಬ ತಪ್ಪಿನ ಅರಿವು ಆಕೆಗೆ ಆಗಿದೆಯಂತೆ.

ಕೊನೆಗೂ ವಾಣಿಗೆ ದೊಡ್ಡ ಅವಕಾಶವೊಂದು ದೊರಕಿದೆ. ಆದಿತ್ಯ ಚೋಪ್ರಾ ನಿರ್ದೇಶನದ ‘ಬೆಫಿಕ್ರೆ’ಯಲ್ಲಿ ರಣವೀರ್ ಸಿಂಗ್‌ಗೆ ವಾಣಿ ನಾಯಕಿ. ಹೊಸ ಉತ್ಸಾಹದೊಂದಿಗೆ ಮತ್ತೆ ಸಿನಿಮಾಯಾನ ಪ್ರಾರಂಭಿಸುತ್ತಿರುವ ಆಕೆಗೆ ಪರಿಣೀತಿ ಚೋಪ್ರಾ ಕೆಲವೊಂದು ಸಲಹೆಗಳನ್ನೂ ನೀಡಿದ್ದಾಳಂತೆ. ‘ಬೆಫಿಕ್ರೆ’ ಕಷ್ಟವನ್ನು ಮೈಮೇಲೆ ಎಳೆದುಕೊಂಡಿರುವ ‘ಕಿರಿಯ’ ಸಿನಿಮಾ ಎಂಬ ವಿಶ್ಲೇಷಣೆ ಆದಿತ್ಯ ಚೋಪ್ರಾನದು.

■ ಅಮಿ